# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 736 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| ಉತ್ತರಿಸುವ ದಿನಾಂಕ | : | 21.02.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಇಲಾಖೆಯ ಮೂಲಕ ಸರ್ಕಾರಿ ಖಾಸಗಿ ಸ್ಥಳಗಳಲ್ಲಿ ರಸ್ತೆ ನಿರ್ಮಿಸುವ ಹಾಗೂ ಯೋಜನಾ ಹಾಗೂ ಸ್ಥಳೀಯ ಪ್ರಾಧಿಕಾರಗಳಿಗೆ ಹಸ್ತಾಂತರಿಸುವ ನಿಯಮಗಳಾವುವು; ಈಗಾಗಲೇ ಇರುವ ರಸ್ತೆಗಳನ್ನು ಗುರುತಿಸಿ ಕಂದಾಯ ದಾಖಲೆಗಳಲ್ಲಿ ದಾಖಲಿಸಲಾಗಿದೆಯೇ; (ವಿವರ ನೀಡುವುದು) | ಸರ್ಕಾರಿ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ-1964ರ ಕಲಂ 71ರಡಿಯಲ್ಲಿ ಕಾಯ್ದಿರಿಸಿ ಅಥವಾ ಗ್ರಾಮ ನಕಾಶೆಯಲ್ಲಿ ನಮೂದಾಗಿರುವ ರಸ್ತೆಗಳನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳಿಗೆ ಅಭಿವೃದ್ಧಿಪಡಿಸಲು ಹಸ್ತಾಂತರಿಸಲಾಗುತ್ತಿದೆ.<br><br>ಖಾಸಗಿ ಜಮೀನುಗಳಲ್ಲಿ ಸಂಬಂಧಪಟ್ಟ ಮಾಲೀಕರು ಒಪ್ಪಿಗೆ ನೀಡಿದ್ದಲ್ಲಿ, ಕರ್ನಾಟಕ ಭೂ ಕಂದಾಯ ಅಧಿನಿಯಮ-1966ರ ನಿಯಮ 59ರಂತೆ ಪಹಣಿ ಅಂಕಣ-11ರಲ್ಲಿ ನಮೂದು ಮಾಡಲು ನಿಯಮಗಳಲ್ಲಿ ಅವಕಾಶ ಇರುತ್ತದೆ.<br><br>ರೀಸರ್ವೆ ಮತ್ತು ಸೆಕೆಂಡರಿ ರೀ ಕ್ಲಾಸಿಫಿಕೇಷನ್‌ನಂತೆ ಈಗಾಗಲೇ ಗ್ರಾಮನಕಾಶೆಗಳಲ್ಲಿ ಕಾಲುದಾರಿ ಮತ್ತು ಬಂಡಿದಾರಿಗಳನ್ನು ಗುರುತಿಸಿದ್ದು ಕಂದಾಯ ದಾಖಲೆಗಳಲ್ಲಿ ನಮೂದಾಗಿರುತ್ತದೆ. |
| ಆ) | ಖಾಸಗಿ ರಸ್ತೆಯನ್ನು ಸಾರ್ವಜನಿಕ ಹಾಗೂ ಸಂಪರ್ಕ ರಸ್ತೆ ಎಂದು ಪರಿಗಣಿಸಿ, ಭೂ ಪರಿವರ್ತನೆ ಮಾಡುವುದರಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಹಾಗೂ ರಸ್ತೆಯನ್ನು ಸಾರ್ವಜನಿಕ ಎಂದು ಘೋಷಿಸದೆ ಇರುವುದರಿಂದ ಸದರಿ ಜಾಗಗಳಿಗೆ ಲೇಔಟ್ ಅನುಮೋದನೆ ನೀಡುವಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಖಾಸಗಿ ರಸ್ತೆಯನ್ನು ಸಂಪರ್ಕ ರಸ್ತೆ ಎಂದು ಪರಿಗಣಿಸಿ ಯಾವುದೇ ಜಮೀನನ್ನು ಭೂ ಪರಿವರ್ತನೆ ಮಾಡುವುದಿಲ್ಲ. |
| ಇ) | ಖಾಸಗಿ ಜಾಗಗಳನ್ನು ರಸ್ತೆಯ ಹಕ್ಕಿಗಾಗಿ ನೋಂದಾವಣೆ ಮಾಡದೆ ಅಥವಾ ಪ್ರಮಾಣ ಪತ್ರದ ಆಧಾರದಲ್ಲಿ/ಮೌಖಿಕವಾಗಿ ಅನುಮತಿಯ ಮೂಲಕ ಸಂಪರ್ಕ ನೀಡಲು ಅವಕಾಶ ನೀಡಿ ಕೆಲವು ವರ್ಷಗಳ ನಂತರ ಸದರಿ ಜಾಗದ ಮಾಲೀಕರು ಅಥವಾ ವಂಶಸ್ಥರು ಸದರಿ ರಸ್ತೆ ಉಪಯೋಗಿಸಲು ತಕರಾರು ಮಾಡಿ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 23 ಎಲ್‌ಜಿಪಿ 2022, ದಿನಾಂಕ:20.10.2023ರ ಸುತ್ತೋಲೆಯಲ್ಲಿ ರೈತರು ವ್ಯವಸಾಯದ ಉದ್ದೇಶಗಳಿಗೆ ತಿರುಗಾಡಲು ಬಳಸುವ ಜಮೀನುಗಳಲ್ಲಿ ಕಾಲುದಾರಿ, ಬಂಡಿದಾರಿ ಸೌಲಭ್ಯ ಒದಗಿಸುವ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ. |
| ಈ) | ಸಾರ್ವಜನಿಕ ಸಂಸ್ಥೆಗಳಾದ ಶಾಲೆ, | ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ಅಂಗನವಾಡಿ, ದೇವಸ್ಥಾನ, |

| | | |
|---|---|---|
| | ಅಂಗನವಾಡಿ, ದೇವಸ್ಥಾನ, ಚರ್ಚ್, ಮಸೀದಿ ಹಾಗೂ ಇತರ ಸಾರ್ವಜನಿಕ ಸ್ಥಳಗಳನ್ನು ಜನವಸತಿ ಪ್ರದೇಶಗಳಿಗೆ ಸಂಪರ್ಕಿಸುವ ಹತ್ತಿರದ ದಾರಿಯನ್ನು ಅಭಿವೃದ್ಧಿಪಡಿಸದೆ ಇರುವುದರಿಂದ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ಸುತ್ತು ಬಳಸಿ ಸಂಚರಿಸಬೇಕಾದ ತೊಂದರೆಯನ್ನು ತಪ್ಪಿಸಲು ಸದರಿ ಸಾರ್ವಜನಿಕ ಸ್ಥಳಗಳಿಗೆ ಸಂಪರ್ಕ ಕಲ್ಪಿಸಬಹುದಾದ ಹತ್ತಿರದ ದಾರಿಯನ್ನು ಅಧಿಸೂಚನೆಯ ಮೂಲಕ ಅಭಿವೃದ್ಧಿ ಪಡಿಸಿ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; ಈ ಕುರಿತು ಸರ್ಕಾರದ ನಿಲುವೇನು? (ವಿವರ ಒದಗಿಸುವುದು) | ಚರ್ಚ್, ಮಸೀದಿ ಹಾಗೂ ಇತರ ಸಾರ್ವಜನಿಕ ಸ್ಥಳಗಳನ್ನು ಜನವಸತಿ ಪ್ರದೇಶಗಳಿಗೆ ಸಂಪರ್ಕಿಸುವ ಸಂಬಂಧ ಸದರಿ ಉದ್ದೇಶಗಳಿಗಾಗಿಯೇ ಜಮೀನು ಕಾಯ್ದಿರಿಸುವ/ಮಂಜೂರು ಮಾಡುವ ಸಂದರ್ಭದಲ್ಲಿಯೇ ಸಂಪರ್ಕ ರಸ್ತೆಯನ್ನು ಗುರುತಿಸಲಾಗುತ್ತಿದೆ. ತದನಂತರ ಸ್ಥಳೀಯ ಸಂಸ್ಥೆಗಳ ಅನುದಾನದಿಂದ ರಸ್ತೆ ಅಭಿವೃದ್ಧಿ ಬಗ್ಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 33 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು